ಶ್ರೀ ಕಾಗೋಡು ತಿಮ್ಮಪ್ಪ .— ಪೀ ಎಸ್ ಇ ಬಿಯ ಕಟ್ಟಡಕ್ಕೆ ೬೧೬ ರೂಪಾಯಿ, ಆಪರೆ ಗುಲ್ಲಾಳ್ ಎನ್ನತಕ್ಕವರ ಕಟ್ಟಡಕ್ಕೆ ೧೫೦೦ ರೂಪಾಯಿ ಕೊಡುವುದಕ್ಕೆ ಕಾರಣವೇನು, ಮಂತ್ರಿ ಈ ವ್ಯತ್ಯಾಸ ಏಕೆ ?

ಶ್ರೀ ಎಚ್. ಎಂ. ಚನ್ನಬಸಪ್ಪ.— ಎಂ ಎಸ್ ಇ ಬಿಯ ಕಟ್ಟಡ ಹಳೆಯ ಕಟ್ಟಡ. ಆದ್ದರಿಂದ ಅದಕ್ಕೆ ಬಾಡಿಗೆ ಕಡಿಮೆ. ಬಾಡಿಗೆಯು ಆಯಾ ಸ್ಥಳ, ಸನ್ನಿವೇಶ ಮತ್ತು ಡಿಮ್ಯಾಂಡ್‌ಗಳ ಮೇಲೆ ಹೊಂದಿ ಕೊಂಡಿದೆ.

ಶ್ರೀ ಕಾಗೋಡು ತಿಮ್ಮಪ್ಪ.— ಎಂ ಎಸ್ ಇ ಬಿಯ ಕಟ್ಟಡದಲ್ಲಿ ಇನ್ನೂ ಅರ್ಧ ಭಾಗ ಖಾಲಿ ಇದೆ. ಹಾಗಿರುವಾಗ ಕನ್ನಿಂಗ್‌ಹ್ಯಾಂ ರೋಡಿನಲ್ಲಿ ೧೦೦೦ ರೂಪಾಯಿ ಕೊಟ್ಟು ಬೇರೆಯೇ ಕಟ್ಟಡವನ್ನು ಹುಡುವುದಕ್ಕೆ ಕಾರಣವೇನು ?

ಶ್ರೀ ಎಚ್. ಎಂ. ಚನ್ನಬಸಪ್ಪ.— ಆಗ ಇದನ್ನು ಮಾಡಿದ್ದಾರೆ, ಈಗ ಹಅನ್ನು ಪುನರ್‌ವಿಮರ್ಶೆ ಹುಡುತ್ತಿದ್ದಾರೆ.

ಶ್ರೀ ಕಾಗೋಡು ತಿಮ್ಮಪ್ಪ.— ಮ್ಯಾನೇಜಿಂಗ್ ಡೈರೆಕ್ಟರ್ ಅಫೀಸ್ ಅವಾವಶ್ಯಕವಾಗಿ ಕಾಣುತ್ತಹೆ. ಆದ್ದರಿಂದ ಅದನ್ನು ಎಂ ಎಸ್ ಇ ಬಿ ಕಟ್ಟಡದಲ್ಲಿ ಹಾಕುವುದಕ್ಕೆ ಪ್ರಯತ್ನ ಮಾಡುತ್ತೀರಾ?

ಶ್ರೀ ಎಚ್ ಎಂ. ಚನ್ನಬಸಪ್ಪ.—ಸಮಗ್ರವಾಗಿ ಎಲ್ಲಾ ವಿಚಾರಗಳನ್ನು ಪುನರ್‌ವಿಮರ್ಶೆ ಮಾಡುತ್ತೆವೆ

ಶ್ರೀ ಕಾಗೋಡು ತಿಮ್ಮಪ್ಪ.— ಎಂ ಎಸ್ ಇ ಬಿ ಕಟ್ಟಡ ಬಿಟ್ಟು ಉಳಿದ ಮೂರು ಕಟ್ಟಡಗಳಿಗೆ ಇಷ್ಟು ಬಾಡಿಗೆ ಕೊಡಬೇಕೆಂದು ಪಿ ಡಬ್ಲೂ ಡಿ ಇಲಾಖೆಯಂವರು ನಿರ್ಧರ್ಪೆ ಮಾಡಿದ್ದಾರೆಯೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.— ಅಲ್ಲಿ ಅಕ್ಕಪಕ್ಕದಲ್ಲಿ ಸ್ಕ್ವೆರ್ ಫೀಟಿಗೆ ಏನು ಕೊಡಬೇಕೆಂಬುದನ್ನು ನೋಡಿಕೊಂಡು ಇವುಗಳಿಗೆ ಎಷ್ಟು ಬಾಡಿಗೆ ನಿಗದಿ ಮಾಡಬಹುದೆಂದು ಗೊತ್ತು ಮಾಡಿದ್ದಾರೆ.

MADAM SPEAKER.— Now Question Hour is over.

## QUESTION FOR ANSWERS ON THE DAY (BUT NOT TAKEN UP)

### COMPENSATION FOR SUBMERGED LANDS OF HESARUR AND SINGTALUR VILLAGES

51. SRI K. H. KURADGI (Mundargi).— Will the Minister for Revenue be pleased to state.—

(*a*) whether full compensation has been paid by the Government fer Hesarur and Singtalur villages of Mundargi Taluk submerged under Tungabhadra Reservoir Project,

(*b*) if not, the reasons for not paying the said compensation so far,

(*c*) whether compensation amount would be paid at least this year ?

SRI N. HUTCHAMASTHY GOWDA (Minister for Revenue).—

(*a*) No. 75 per cent of the compensation amount has been paid.

(*b*) This question does not arise in view of reply to clause (a).

(*c*) Action regarding payment of the remaining 25 per cent of the compensation amount will be taken early.